# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೦೫, ಮಾರ್ಚ್, ೨೦೨೨(ಫಾಲ್ಗುಣ, ೧೪, ಶಕವರ್ಷ, ೧೯೪೩)<br>BENGALURU, SATURDAY, 05, MARCH, 2022(PHALGUNA, 14, SHAKAVARSHA, 1943) | ನಂ. ೯೭<br>No. 97 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 56 SHASANA 2021, BENGALURU, DATED:05.03.2022**

The Karnataka Stamp (Amendment) Bill, 2022 ಇದಕ್ಕೆ 2022ರ ಮಾರ್ಚ್ ತಿಂಗಳ 4ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 11 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

KARNATAKA ACT NO. 11 OF 2022

(First Published in the Karnataka Gazette Extra-ordinary on the 5th Day of March, 2022)

## THE KARNATAKA STAMP (AMENDMENT) ACT, 2022

(Received the assent of the Governor on the 4th day of March, 2022)

An Act further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the Seventy third year of the Republic of India as follows:-

**1. Short title and commencement.–** (1) This Act may be called the Karnataka Stamp (Amendment) Act, 2022.

(2) It shall come into force at once.

**2. Amendment of section 2.-** In the Karnataka Stamp Act, 1957, (Karnataka Act 34 of 1957) (hereinafter referred to as the Principal Act), in section 2, in sub-section (1), for clause (r), the following shall be substituted, namely:-

"(r) "Stamp" means impressed stamp or digital e-stamp which is generated electronically and "Stamp paper" means a paper bearing the impressed stamp."

**3. Amendment of section 9.-** In the Principal Act, in section 9, in sub-section (1), in clause (a), after the last proviso, the following shall be inserted, namely:-

"Provided also that the State Government may, in public interest, by notification, remit, during the policy period of five years from the date of 04-11-2019 or till a new policy is announced, stamp duty payable on the instruments to be specified therein, executed by or in favour of the eligible enterprises, in connection with the Karnataka New Textile and Garment Policy, 2019-24, specified in the Government Order No. CI 115 JAKAIEE 2017, dated: 04.11.2019 or specified by the State Government from time to time subject to production of certificate to that effect from the Prescribed Authority."

**4. Amendment of Schedule.-** In the Principal Act, in the schedule, in Article 20, in column (3), for the second proviso, the following shall be substituted, namely:-

"Provided also that notwithstanding anything contrary contained in this Act, where a lease-cum-sale agreement was in respect of a site allotted by any house Building Co-operative Society registered under the Karnataka Co-operative Societies Act, 1959 (Karnataka Act 11 of 1959), and in furtherance of such agreement a conveyance is subsequently executed, the duty payable on such conveyance shall be on the market value of such site as on the date of execution of the lease-cum-sale agreement".

By Order and in the name of
the Governor of Karnataka,

**G.SRIDHAR**
Secretary to Government
Department of Parliamentary
Affairs and Legislation

## <u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>

## <u>ಅಧಿಸೂಚನೆ</u>

**<u>ಸಂಖ್ಯೆ: ಸಂವ್ಯಶಾಇ 56 ಶಾಸನ 2021, ಬೆಂಗಳೂರು, ದಿನಾಂಕ:05.03.2022.</u>**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-A ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Stamp (Amendment) Act, 2022 (Karnataka Act No. 11 of 2022) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV)ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 11**

(2022 ರ ಮಾರ್ಚ್ ತಿಂಗಳ 5ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2022**

(2022 ರ ಮಾರ್ಚ್ ತಿಂಗಳ 4ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ, 34) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2022ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ ಖಂಡ (ಆರ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

''(ಆರ್) ''ಸ್ಟಾಂಪು'' ಎಂದರೆ ಮುದ್ರೆ ಹಾಕಲಾದ ಸ್ಟಾಂಪು ಅಥವಾ ವಿದ್ಯುನ್ಮಾನವಾಗಿ ಸೃಜಿಸಲಾದ ಡಿಜಿಟಲ್ ಇ-ಸ್ಟಾಂಪು ಮತ್ತು ''ಛಾಪಾ ಕಾಗದ'' ಎಂದರೆ ಮುದ್ರೆ ಹಾಕಲಾದ ಸ್ಟಾಂಪನ್ನು ಹೊಂದಿರುವ ಕಾಗದ.''

**3. 9ನೇ ಪ್ರಕರಣ ತಿದ್ದುಪಡಿ.-** ಮೂಲ ಅಧಿನಿಯಮದ 9ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಎ) ಖಂಡದಲ್ಲಿ ಬರುವ ಕೊನೆಯ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''ಅಲ್ಲದೇ, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ, ಅಧಿಸೂಚನೆಯ ಮೂಲಕ, ದಿನಾಂಕ: 04.11.2019 ರಿಂದ ಐದು ವರ್ಷಗಳ ನೀತಿಯ ಅವಧಿಯಲ್ಲಿ ಅಥವಾ ಹೊಸ ನೀತಿಯನ್ನು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಘೋಷಿಸುವವರೆಗೆ, ಸರ್ಕಾರಿ ಆದೇಶ ಸಂಖ್ಯೆ: ಸಿಐ 115 ಜಕಾಇ 2017, ದಿನಾಂಕ 04.11.2019 ರಲ್ಲಿ ನಿರ್ದಿಷ್ಟಪಡಿಸಿದ ಅಥವಾ ನಿಯಮಿಸಲಾದ ಪ್ರಾಧಿಕಾರದಿಂದ ಆ ಮಟ್ಟಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಕರ್ನಾಟಕ ನೂತನ ಜವಳಿ ಮತ್ತು ಸಿದ್ಧಉಡುಪು ನೀತಿ 2019-24ರ ಸಂಬಂಧದಲ್ಲಿ ಅರ್ಹ ಉದ್ದಿಮೆಗಳು ಅಥವಾ ಅವರ ಪರವಾಗಿ ಬರೆದುಕೊಟ್ಟ ಯಾವುದೇ ಲಿಖಿತದ ಮೇಲೆ ಸಂದಾಯವಾಗುವ ಸ್ಟಾಂಪು ಶುಲ್ಕವನ್ನು ಮಾಫಿ ಮಾಡಬಹುದು.''

**4. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ ಅನುಸೂಚಿಯಲ್ಲಿ 20ನೇ ಅನುಚ್ಛೇದದ (3)ನೇ ಅಂಕಣದಲ್ಲಿನ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಅಲ್ಲದೇ ಪರಂತು ಈ ಅಧಿನಿಯಮಕ್ಕೆ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ನೋಂದಾಯಿಸಿದ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದಿಂದ ಹಂಚಿಕೆಯಾದ ನಿವೇಶನದ ಸಂಬಂಧದಲ್ಲಿ ಭೋಗ್ಯ ಮತ್ತು ಮಾರಾಟ ಕರಾರು ಮಾಡಿಕೊಂಡಿದ್ದು, ಅಂಥ ಕರಾರಿನ ಮುಂದುವರಿಕೆಗಾಗಿ ತರುವಾಯದ ಹಸ್ತಾಂತರಣ ಪತ್ರವನ್ನು ಮಾಡಿಕೊಂಡಿದ್ದರೆ, ಅಂಥ ಹಸ್ತಾಂತರಣ ಪತ್ರದ ಮೇಲೆ ಪಾವತಿಸಬೇಕಾದ ಸುಂಕವು ಭೋಗ್ಯ ಮತ್ತು ಮಾರಾಟ ಕರಾರನ್ನು ಬರೆದುಕೊಟ್ಟ ದಿನಾಂಕದಂದು ಇದ್ದ ಅಂಥ ನಿವೇಶನದ ಮಾರುಕಟ್ಟೆ ಮೌಲ್ಯದ ಮೇಲೆ ಇರತಕ್ಕದ್ದು".

The above translation of the Karnataka Stamp (Amendment) Act, 2022 (Karnataka Act 11 of 2022) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE